ತುಂಗಭದ್ರಾ ನದಿಯಿಂದ ತಿಮ್ಮನಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ಸಾಮೂಹಿಕ ನೀರು ಸರಬರಾಜು ಯೋಜನೆ.

30. ಶ್ರೀ ಕೆ. ಬಿ. ಕೋಳಿವಾಡ್(ರಾಣೆಬೆನ್ನೂರು):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುರೆ?

ಅ) ತುಂಗಭದ್ರಾ ನದಿಯಿಂದ ತಿಮ್ಮೇನಹಳ್ಳಿ ಮೆಣಸಿನಹಳ್ಳಿ, ಪಥೇಪುರ, ಮಲನಾಯಕನಹಳ್ಳಿ, ಬಡೇ ಬಸಾಪುರ, ಸಣ್ಣ ಸಂಗಾಪುರ ಗ್ರಾಮಗಳಿಗೆ ಸಂಯುಕ್ತ ನಳದ ನೀರು ಸರಬರಾಜು ಮಾಡುವ ಯೋಜನೆಯ ಪ್ರಸ್ತಾವನೆಯೇನಾದರೂ ಸರ್ಕಾರದ ಮುಂದಿರುವುದೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದಿಂದ ತೆಗೆದುಕೊಂಡ ಕ್ರಮಗಳು ?

ಶ್ರೀ ಬಿ. ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ಸಚಿವರು):–

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತಮೂಲಕ - ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪಮೊಯ್ಲಿ:– ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ನೇಸರಗಿ ಗ್ರಾಮದಲ್ಲಿ ಗ್ರಾಮೀಣ ಬ್ಯಾಂಕ್ ಕಟ್ಟಡ ಮಂಜೂರಾತಿ

295. ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ):– ಮಾನ್ಯ ಗ್ರಾಮೀಣಾಭಿವೃದ್ಧ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ನೇಸರಗಿ ಗ್ರಾಮದಲ್ಲಿ ಗ್ರಾಮೀಣ ಬ್ಯಾಂಕ್ ಕಟ್ಟಡ ಕಟ್ಟಲು ಆಡಳಿತಾತ್ಮಕ ಮಂಜೂರಾತಿಯನ್ನು ಯಾವಾಗ ನೀಡಲಾಯಿತು.

ಆ) ಎಷ್ಟು ಹಣಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಡಲಾಯಿತು.

ಇ) ಈ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಈ ಕೆಲಸವನ್ನು ಮುಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಉ) ಏಪ್ರಿಲ್ 90ರಿಂದ ಈ ಕೆಲಸಕ್ಕೆ ಖರ್ಚಾಗಿರುವ ಹಣವೆಷ್ಟು?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ) ದಿನಾಂಕ: 18–5–86 ರಂದು ಆಡಳಿತಾತ್ಮಕ ಮಂಜೂರಾತಿ ನೀಡಲಾಯಿತು.

ಆ) ರೂ. 2.41 ಲಕ್ಷಗಳಿಗೆ.

ಇ) ಇಲ್ಲ

ಈ) 1987–88 ರಲ್ಲಿ ಎನ್‌ಆರ್‌ಇಪಿ ಯೋಜನೆ ಯಡಿಯಲ್ಲಿ 0.52 ಲಕ್ಷ ರೂ. ಗಳನ್ನು ಹಾಗೂ 1990–91ರ ಕಾರ್ಯ ಯೋಜನೆಯಲ್ಲಿ ರೂ. 1.29 ಲಕ್ಷಗಳನ್ನು ಒದಗಿಸಿದೆ ಕಟ್ಟಡ ಕಾರ್ಯವು ಮೇಲ್ಛಾವಣಿಯ ಹಂತಕ್ಕೆ ಬಂದಿದ್ದು ಕೆಲಸವು ತ್ವರಿತಗತಿಯಿಂದ ನಡೆಯುತ್ತಿದೆ.

ಉ) ರೂ. 76,634.00 ಖರ್ಚಾಗಿದೆ.

ನೇಸರಗಿ ಗ್ರಾಮದಲ್ಲಿ ಪ್ರೌಢಶಾಲೆ ಕಟ್ಟಡ ಮಂಜೂರಾತಿ

296 ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ನೇಸರಗಿ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಕಟ್ಟಡ ಕಟ್ಟಲು ಆಡಳಿತಾತ್ಮಕ ಮಂಜೂರಾತಿಯನ್ನು ಯಾವಾಗ ನೀಡಲಾಗುವುದು?

ಆ) ಎಷ್ಟು ಹಣಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ?

ಇ) ಈ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಕೆಲಸ ಮುಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಉ) ಏಪ್ರಿಲ್ 90 ರಿಂದ ಈ ಕೆಲಸಕ್ಕೆ ಖರ್ಚಾಗಿರುವ ಹಣವೆಷ್ಟು?

ಶ್ರೀ ಎಂ. ವೀರಪ್ಪ ಮೊಯ್ಲಿ: (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–

ಅ) ದಿನಾಂಕ: 2–1–1987 ರಂದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ.

ಆ) ರೂ. 4.97 ಲಕ್ಷಗಳು

ಇ) ಹೌದು

ಈ) ಗುತ್ತಿಗೆದಾರರು ನಿಯಮಾವಳಿಗನುಸಾರ ಕಾಮಗಾರಿ [illegible] ಕಾರಣ ಕಾರ್ಯ ಸ್ಥಗಿತಗೊಂಡಿದ್ದು ಇವರನ್ನು ಬದಲಾಯಿಸಿ ಕಾನೂನು ಪ್ರಕಾರ ಬೇರೊಬ್ಬರಿಗೆ ಗುತ್ತಿಗೆ[illegible]ಲು ಕ್ರಮಕೈಗೊಳ್ಳಲಾಗುವುದು.

ಉ) ಅಕ್ಟೋಬರ್ 90ರ ಅಂತ್ಯದವರೆಗೆ ರೂ. 0.54 ಲಕ್ಷಗಳು.

ರಾಜ್ಯದಲ್ಲಿ ಕಾನೂನು ಬಾಹಿರವಾಗಿ ಆಕ್ರಮಿಸಿರುವ ಅರಣ್ಯ ಭೂಮಿ

291. ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–